and clarify the point Sir. It is my request through the Speaker, to the Chief Minister to look into the matter and sternly deal with those who are found guilty.

ಶ್ರೀ ಆರ್. ಎಸ್. ಪಾಟೀಲ್.—ಪೋಲೀಸರು ಕ್ರಮ ತೆಗೆದುಕೊಳ್ಳುವುದನ್ನು ಮತ್ತು ಇತರ ವಿಷಯಗಳನ್ನು ಇಲ್ಲಿ ಖಂಡಿಸುವುದರ ಜೊತೆಯಲ್ಲಿ ಇನ್ನೊಂದು ಮಾತನ್ನು ಎಲ್ಲರೂ ಗಮನಿಸಬೇಕಾಗಿದೆ. ಅದೇನೆಂದರೆ, ಉಪಾಧ್ಯಾಯರ ಕೊಠಡಿಯಲ್ಲಿ ಆಕೆಯ ಸೀರೆಯನ್ನು ಹಿಡಿದು ಎಳೆಯುವ ಸಂದರ್ಭದಲ್ಲಿ ಇತರ ಶಿಕ್ಷಕರು ಏನು ಮಾಡುತ್ತಿದ್ದರು ? ಆವರು ಇನ್ನೆಂತಹ ಹೇಡಿಗಳಿರಬಹುದು. ಇದನ್ನು ಖಂಡಿಸುವವರು ಯಾರೂ ಇಲ್ಲವಲ್ಲ. ಏರಡನೆಯದಾಗಿ, ಆಕೆ ಓಡುತ್ತಿರುವಾಗ ಆ ಊರಿನ ಸದ್ಗೃಹಸ್ಥರು ಯಾರೂ ಹರಿಜನ ಮಹಿಳೆ ಎಂದು ಒಳಗೆ ರಕ್ಷಣೆ ಕೊಡಲಿಲ್ಲವೆಂದು ತಮ್ಮ ಉತ್ತರದಿಂದ ಕಂಡು ಬರುತ್ತದೆ. ಮೊದಲು ಆ ಜನರನ್ನು ಖಂಡಿಸಬೇಕು, ರಿಮೂವಲ್ ಆಫ್ ಅನ್‌ಟಚಬಿಲಿಟಿ ಆಕ್ಟ್ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಒಂದು ವೇಳೆ ಉತ್ತಮ ಕುಲದ ಸ್ತ್ರೀಯಾಗಿದ್ದರೆ ಒಳಗೆ ಕರೆದುಕೊಂಡು ರಕ್ಷಣೆ ನೀಡುತ್ತಿರಲಿಲ್ಲವೆ, ಪ್ರಾಣ ರಕ್ಷಣೆ ಮಾಡುತ್ತಿರಲಿಲ್ಲವೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ.

ಅಧ್ಯಕ್ಷರು.—ಈ ವಿಚಾರಗಳನ್ನೆಲ್ಲ ಬೇಡಿಕೆ ಮೇಲಣ ಚರ್ಚೆಯಲ್ಲಿ ಮಾತನಾಡಿ ಅಮೂಲ್ಯವಾದ ಸಲಹೆಗಳನ್ನು ಕೊಡಿ, ಆದರೆ ಈಗ ಇದನ್ನೆಲ್ಲಾ ಪ್ರಸ್ತಾಪಿಸುವುದು ಸೂಕ್ತವಲ್ಲ.

Constitution of a Rules Committee

SRI R. GUNDU RAO (Chief Minister).— Sir, I beg to move.

"That a Committee consisting of Speaker, Deputy Speaker and 15 other members of the Legislative Assembly with the Speaker as Chairman, be constituted to consider the Rules of Procedure and Conduct of Business in Karnataka Legislative Assembly and to suggest suitable amendments there by and the Speaker may be asked to nominate personnel of the Committee."

MR. SPEAKER.—The question is.

"That a Committee consisting of Speaker, Deputy Speaker and 15 other members of the Legislative Assembly with the Speaker as Chairman, be constituted to consider the Rules of Procedure and Conduct of Business in Karnataka Legislative Assembly and to suggest suitable amendments thereby and the Speaker may be asked to nominate personnel of the Committee."

The Motion was adopted

MR. SPEAKER.— I shall announce the names tomorrow.

SRI P. RAMADEV.— Sir, please give them a time limit also. ಇಂತಿಷ್ಟು ಅವಧಿಯೊಳಗೆ ವರದಿ ಕೊಡಬೇಕೆಂದು ಮಾಡಿ.

ಅಧ್ಯಕ್ಷರು.— ಮಾಡೋಣ.

SRI C. M. ARMUGHAM.—Sir, I would like to make a submission. I have not given a notice. Since this is a very important issue, I seek your permission to raise the matter. This is an issue about ill-treatment meted out to a Scheduled Caste student.

MR. SPEAKER.— Please give a notice so that we can take it up. You know this is not the Zero hour.

SRI C. M. ARMUGHAM.— Sir, where is the time for giving notice and all that. If the Speaker permits me I shall raise the matter. Otherwise tomorrow I shall raise it.

Financial Business

Discussion on Demands for Grants

MR. SPEAKER.—The hon. members are requested to be brief on discussion for demands on Food and Civil Supplies, Wakfs and Labour and Employment. I shall call the Labour Minister at 5-00 P.M., for reply. Now let Sri. Sheernalli Chandrashekar, who spoke for only 20 minutes on the previous day, continue his speech.

† ಶ್ರೀ ಎಸ್.ಎಂ. ಶೀರ್ನಳ್ಳಿ ಚಂದ್ರಶೇಖರ್ (ಹೊಸನಗರ).— ಮಾನ್ಯ ಅಧ್ಯಕ್ಷರೇ, ಆಹಾರ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಬೆಂಗಳೂರು ನಗರದಲ್ಲಿ ಆಹಾರ ವಿತರಣೆಯ ಒಂದು ಪದ್ಧತಿ ಇದೆ ಅದೇನೆಂದರೆ, ಆಹಾರ ಇಲಾಖೆಯವರು ಪತ್ರಿಕೆಗಳಲ್ಲಿ ಈ ರೀತಿ ಪ್ರಕಟಣೆ ಮಾಡುತ್ತಾರೆ—ಮಲ್ಲೇಶ್ವರದ ಇಂಥ ಡಿಪೋದಲ್ಲಿ ಇಂಥ ದಿವಸ ದವಸ ಧಾನ್ಯಗಳನ್ನು ವಿತರಣೆ ಮಾಡುತ್ತೇವೆ, ಬಸವನ ಗುಡಿಯ ಇಂಥ ಡಿಪೋದಲ್ಲಿ ಇಂಥ ದಿವಸ ದವಸ ಧಾನ್ಯಗಳನ್ನು ವಿತರಣೆ ಮಾಡುತ್ತೇವೆ ಎಂದು ಮೊದಲನೆಯದಾಗಿ ನಮ್ಮ ದೇಶದಲ್ಲಿ ಪತ್ರಿಕೆ ಓದುವ ಜನರು ಕಡಿಮೆ, ಅದಕ್ಕಿಂತಲೂ ಮುಖ್ಯವಾಗಿ ಅಕ್ಷರಸ್ಥರು ವಿರಳ. ಹೀಗಿರುವಾಗ, ಅಂತೂ ಇಂತೂ ವಿಚಾರ ತಿಳಿದು ಬಳಕೆದಾರ ಡಿಪೋಗಳಿಗೆ ಹೋಗಿ ಇಂಥ ದಿವಸ ಆಹಾರ ಧಾನ್ಯಗಳನ್ನು ವಿತರಣೆ ಮಾಡುತ್ತೇವೆಂದು ಹೇಳಿದ್ದೀರಿ, ಆದರ ಪ್ರಕಾರ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದರೆ ಅವರು ಹೇಳುತ್ತಾರೆ, ಅದು ಕೇವಲ ಪ್ರಕಟಣೆ ಮಾತ್ರ. ನಮಗೆ ಇನ್ನೂ ಸಕ್ಕರೆಯಾಗಲೀ, ಅಕ್ಕಿಯಾಗಲೀ, ಯಾವ ದವಸ ಧಾನ್ಯಗಳು ಕೂಡ ಬಂದಿಲ್ಲ ಎಂದು. ಅವರು ಪ್ರಕಟಣೆ ಮಾಡಿರುವುದು ಇಂಥ ತಾರೀಖಿನ ದಿವಸ ನಮಗೆ ಕೊಡುತ್ತೇವೆಂದು, ಎಂಬುದಾಗಿ ಹೇಳುತ್ತಾರೆ.

೧-೩೦ ಪಿ.ಎಂ.

ಒನೇ ತಾರೀಖು ಬಿಟ್ಟು ಎರಡು ಮೂರು ದಿವಸದ ನಂತರ ಹೋಗಿ ಕೇಳಿದರೆ ಖಿರ್ಚಾಗಿ ಹೋಯಿತು ಎಂಬ ಉತ್ತರ ಕೊಡುತ್ತಾರೆ. ಇದು ಸರ್ವೇಸಾಮಾನ್ಯವಾಗಿ ನಡೆಯತಕ್ಕ ಒಂದು ಕೆಲಸ. ಸರ್ಕಾರದಿಂದ ಕೊಡತಕ್ಕ ಆಹಾರಪದಾರ್ಥಗಳನ್ನು ಚೆನ್ನಾಗಿ ಕೊಡುತ್ತಿರಬಹುದು. ನಿಮ್ಮ ಮೇಲೆ ಆಪಾದನೆ ಹೊರಿಸುವುದಕ್ಕೆ ನಾನು ತಯಾರಿಲ್ಲ. ವ್ಯಾಪಾರಗಾರರು ಮೋಸ ಮಾಡುತ್ತಾರೆ. ಎಲ್ಲಾ ಆಹಾರಪದಾರ್ಥಗಳೂ ವಿಪರೀತ ಕಲಬೆರಕೆಯಾಗಿರುತ್ತವೆ. ಕಲಬೆರಕೆ ಮಾಡದೆ ಬಳಕೆದಾರರಿಗೆ ಸಿಗುವುದೇ ಇಲ್ಲ. ಇಂಥ ಒಂದು ಧಾರುಣ ಪರಿಸ್ಥಿತಿ ಕರ್ನಾಟಕ ರಾಜ್ಯದ ಅಂಗಡಿಗಳಲ್ಲಿವೆ. ಜೊತೆಗೆ ಇದರಲ್ಲಿ ಒಂದು ಮೂಲಭೂತವಾದ ತತ್ವ ನನಗೆ ಅರ್ಥವಾಗುತ್ತಿಲ್ಲ. ಸಮಾಜವಾದಿ ಸಿದ್ಧಾಂತದ ರಾಷ್ಟ್ರದಲ್ಲಿ ಸಾರ್ವಜನಿಕ ಬಳಕೆವಸ್ತುಗಳನ್ನು ವಿತರಣೆ ಮಾಡತಕ್ಕ ಹಕು ಸರ್ಕಾರಕ್ಕಿದೆ. ಅದು ೧೦೦ಕ್ಕೆ ೧೦೦ ರಷ್ಟು ಒಪ್ಪತಕ್ಕ ಮಾತು. ಆದರೆ ಕೆಲವು ಅಂಶ ತೆರೆದ ಮಾರುಕಟ್ಟೆಯಲ್ಲಿ ವ್ಯಾಪಾರ ನಡೆಯತಕ್ಕದ್ದು. ಇನ್ನು ಕೇವಂಶ ನಿಯಂತ್ರಿತ ರೀತಿಯಲ್ಲಿ ವ್ಯಾಪಾರ ನಡೆಯತಕ್ಕದ್ದು ಎಂದರೆ ಇದಕ್ಕೇನು ಕಾರಣ? ಇದರಿಂದ ಏನು ಅನುಕೂಲ? ಈ ಮೂಲ ಭೂತವಾದ ತತ್ವದ ಅರ್ಥ ನನಗೆ ಆಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಬೇಕು.